# ಯೆಹೋವನು ನಮ್ಮ ದೇವರು

"ಯೆಹೋವನು ಸರ್ವೋಪಕಾರಿಯು ತಾನು ನಿರ್ಮಿಸಿದವುಗಳನ್ನೆಲ್ಲಾ ಕರುಣಿಸುವಾತನೂ ಆಗಿದ್ದಾನೆ" ಎಂಬುದಾಗಿ ಕೀರ್ತನಾಗಾರನು ಹೇಳುತ್ತಾನೆ. ( ಕೀರ್ತನೆ 145:9 )

ವಿಶಾಲವಾದ ಅರ್ಥವ್ಯಾಪ್ತಿಯುಳ್ಳ ಈ ಹೇಳಿಕೆಯು ಸಮಸ್ತ ಭೌತಿಕ ಜಗತ್ತನ್ನು ಅದರ ಸವಿಸ್ಥಾರವಾದ ಎಲ್ಲೆಗಳನ್ನು ಅಲ್ಲದೆ ದೀನ ಭಾವವುಳ್ಳ ಅತ್ಯುನ್ನತನಾದ ಅದರ ಪಾಲಕನನ್ನೂ ಸಹ ಒಳಗೊಂಡಿದೆ. ಸೃಷ್ಠಿ ಎಲ್ಲವೂ ಈತನ ಪರಿಪಾಲನೆಯಲ್ಲಿದೆ. ನಮ್ಮ ದೇವರಾದ ಯೆಹೋವನು ಜಗತ್ತಿಗೆಲ್ಲಾ ಸರ್ವಾಧಿಕಾರಿಯಾಗಿದ್ದು, ಆತನ ಹೇರಳವಾದ ಜ್ಞಾನ, ಶಕ್ತಿ, ಸಾಮರ್ಥ್ಯ, ಸದ್ಗುಣ, ಔದಾರ್ಯ, ದಯೋಪಕಾರಗಳು ತನ್ನ ಅತ್ಯುನ್ನತ ಅಧಿಕಾರಸ್ಥಾನದ ಎಲ್ಲಾ ಜವಾಬ್ದಾರಿಗಳನ್ನು ನೆರವೇರಿಸುವದಕ್ಕೆ ಸಮಂಜಸವಾಗಿದೆ.

ಇಂತಹ ಜವಾಬ್ದಾರಿಯನ್ನು ಹೊತ್ತುಕೊಂಡು ನಿರ್ವಹಿಸಬಲ್ಲ ಜ್ಞಾನ, ಸಂಪನ್ಮೂಲಗಳನ್ನು ಹೊಂದಿರುವಾತನನ್ನು ಅರ್ಥಮಾಡಿಕೊಳ್ಳುವ ಪ್ರಯತ್ನಗಳಲ್ಲಿ ಮನುಷ್ಯನ ಬುದ್ಧಿಯು ಎಡವುತ್ತದೆ. ಎಂದಿಗೂ ನಶಿಸದ ಸ್ಮರಣಾಶಕ್ತಿ, ಎಂದಿಗೂ ತಪ್ಪಾಗದ ನ್ಯಾಯತೀರ್ಪು ವಿಫಲವಾಗುವ ಸಾಧ್ಯತೆಯೇ ಇಲ್ಲದ ಹಾಗೆ ನಿರಂತರವಾಗಿರುವ ಸಂಕಲ್ಪಗಳನ್ನು ರೂಪಿಸುವ ಮತ್ತು ಅವುಗಳು ಮುಂದಿನ ಕಾಲಗಳಲ್ಲಿ ನಿಖರವಾಗಿ ಸಕಾಲದಲ್ಲಿ ತಪ್ಪದೆ ನೆರವೇರುವ ಹಾಗೆ ಮಾಡುವ ಜ್ಞಾನ, ವಿರೋಧಿಸಬಲ್ಲ ಎಲ್ಲಾ ಸಜೀವ, ನಿರ್ಜೀವ ವಸ್ತುಗಳನ್ನೂ ಸಹ ಅಧೀನಪಡಿಸಿ, ಅವೆಲ್ಲವೂ ಆತನ ಮಹೋನ್ನತ ಸಂಕಲ್ಪವನ್ನು ನೆರವೇರಿಸಲು ಸಹಕರಿಸುವಂತೆ ಮಾಡಬಲ್ಲ ಶಕ್ತಿ ಮತ್ತು ಕೌಶಲ್ಯ, ಎಂದೂ ನಿದ್ರಿಸದ, ಸದಾ ತೆರೆದಿರುವ ಕಿವಿಗಳುಳ್ಳ ಮತ್ತು ತನ್ನ ಆದಿಪತ್ಯದ ಪಾಲನೆಯಿಂದ ವಿಶ್ರಮ ಬಯಸದೆ, ಅದರ ಎಲ್ಲಾ ಅಗತ್ಯತೆಗಳನ್ನು ಗ್ರಹಿಸಿಕೊಳ್ಳುವ ಹಾಗೂ ವಿಶಾಲವಾದ ತನ್ನ ಆದಿಪತ್ಯದಲ್ಲಿರುವ ಎಲ್ಲದರ ಹಿತಾಸಕ್ತಿಯನ್ನು ನೆರವೇರಿಸಲು ಸಕ್ರಿಯನಾಗಿ ಸದಾ ಎಂದಿಗೂ ಅಂತ್ಯವಾಗದ, ದಣಿವರಿಯದ ಜಾಗರೂಕತೆಯಿಂದಿರುವಾತನ ಬಗ್ಗೆ ಒಂದು ಕ್ಷಣ ಆಲೋಚಿಸಿರಿ.